೪) ಕಾಲೇಜುಗಳಲ್ಲಿ ಖಾಲಿ ಇರುವ ಐದು ಪ್ರೊಫೆಸರ್ ಹುದ್ದೆಗಳನ್ನು ಅರ್ಹ ರೀಡರ್ಸ್‌ಗಳಿಗೆ ಬಡ್ತಿ ನೀಡಿ ಭರ್ತಿ ಮಾಡುವ ಪ್ರಸ್ತಾಪದಲ್ಲಿ ಬೇಗನೆ ಕ್ರಮ ತೆಗೆದುಕೊಳ್ಳಲಾಗುವುದು.

ಖಾಲಿ ಇರುವ ೨೧೬ ರೀಡರ್ಸ್ ಹುದ್ದೆಗಳಲ್ಲಿ ೧೮೭ ಹುದ್ದೆಗಳನ್ನು ಭರ್ತಿ ಮಾಡಲು ಕರ್ನಾಟಕ ಲೋಕ ಸೇವಾ ಆಯೋಗ ಈಗಾಗಲೇ ಕ್ರಮ ತೆಗೆದುಕೊಂಡಿದೆ. ಈ ಬಗ್ಗೆ ಅಭ್ಯರ್ಥಿಗಳ ಸಂದರ್ಶನ ಮುಗಿದಿದೆ. ನೇಮಕಾತಿಗೆ ಅರ್ಹರಾದ ಅಭ್ಯರ್ಥಿಗಳ ಪಟ್ಟಿ ಪ್ರಕಟಿಸಬೇಕಾಗಿದೆ.

ಧಾರವಾಡ ಕೃಷಿ ವಿಶ್ವವಿದ್ಯಾನಿಲಯಕ್ಕೆ ಸರ್ಕಾರದಿಂದ ಹಣ ಬಿಡುಗಡೆ ಮಾಡಲಾದ ಬಗ್ಗೆ

೨೨೮೮ ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಕೃಷಿ ಮತ್ತು ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಧಾರವಾಡ ಕೃಷಿ ವಿಶ್ವವಿದ್ಯಾನಿಲಯಕ್ಕೆ ಸರ್ಕಾರದಿಂದ ಇಲ್ಲಿಯವರೆಗೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ.

ಆ) ವಿಶ್ವವಿದ್ಯಾನಿಲಯದ ಕಾರ್ಯವನ್ನು ಚುರುಕುಗೊಳಿಸಲು ಹಣಕಾಸಿನ ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ.—

ಇ) ವಿಶ್ವವಿದ್ಯಾನಿಲಯವನ್ನು ಸಂಪೂರ್ಣ ಕಾರ್ಯರೂಪಕ್ಕೆ ತರಲು ಯೋಜನೆ ಹಾಕಿಕೊಂಡಿದ್ದಲ್ಲಿ, ಎಷ್ಟು ವೆಚ್ಚ ಆಗುವುದು ಹಾಗೂ ಎಷ್ಟು ವರ್ಷದಲ್ಲಿ ಪೂರ್ಣ ಮಾಡಲಾಗುವುದು ?

ಶ್ರೀ ಬಿ. ರಾಚಯ್ಯ (ಕೃಷಿ ಮತ್ತು ಅರಣ್ಯ ಸಚಿವರು).—

ಅ) ರೂ. ೯೪.೧೭ ಲಕ್ಷ (೧-೧೦-೧೯೬೮ರಿಂದ ಜನವರಿ ೧೯೬೯ರ ವರೆಗೆ).

ಆ) ವಿಶ್ವವಿದ್ಯಾನಿಲಯದ ಕಾರ್ಯಕಲಾಪಗಳನ್ನು ಚುರುಕುಗೊಳಿಸಲು ಆದಷ್ಟು ಮಟ್ಟಿಗೆ ಸರ್ಕಾರದಿಂದ ಅನುದಾನ ನೀಡಲಾಗುತ್ತಿದೆ.

ಇ) ಒಟ್ಟು ೧೯ ಕೋಟಿ ೭೨ ಲಕ್ಷ ರೂಪಾಯಿಗಳು ಬೇಕಾಗುವುದು. ೩ ವರ್ಷಗಳಲ್ಲಿ ಪೂರ್ಣ ಮಾಡಲಾಗುವುದು.

೧೯೬೭-೬೮ ಮತ್ತು ೧೯೬೮-೬೯ ನೇ ಸಾಲಿನಲ್ಲಿ ರಾಜ್ಯದಲ್ಲಿ ಖಾಸಗಿ ಇಂಜಿನಿಯರಿಂಗ್ ಕಾಲೇಜುಗಳನ್ನು ಸ್ಥಾಪಿಸಲು ಅನುಮತಿ ನೀಡಲಾದ ಬಗ್ಗೆ

೨೫೭೭ ಶ್ರೀ ಟಿ.ಎಸ್. ಮಣಿ (ಕೆ.ಜಿ ಎಫ್).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ೧೯೬೭-೬೮ ಮತ್ತು ೧೯೬೮-೬೯ನೇ ಸಾಲಿನಲ್ಲಿ ರಾಜ್ಯದಲ್ಲಿ ಎಷ್ಟು ಖಾಸಗಿ ಇಂಜಿನಿಯರಿಂಗ್ ಕಾಲೇಜುಗಳನ್ನು ಸ್ಥಾಪಿಸಲು ಅನುಮತಿ ನೀಡಲಾಗಿದೆ,

ಆ) ಖಾಸಗಿ ಇಂಜಿನಿಯರಿಂಗ್ ಕಾಲೇಜಿನ ಆಡಳಿತ ಮಂಡಳಿಯವರು, ವಿದ್ಯಾರ್ಥಿಗಳಿಂದ, ವಿಪರೀತ ಕ್ಯಾಪಿಟೇಶನ್ ಶುಲ್ಕ-ಡೊನೇಷನ್ ತೆಗೆದುಕೊಳ್ಳುತ್ತಿರುವುದು ಸರ್ಕಾರಕ್ಕೆ ತಿಳಿದಿರುವುದೇ,

ಇ) ಕ್ಯಾಪಿಟೇಶನ್ ಫೀ ತೆಗೆದುಕೊಳ್ಳುವ ಕೆಟ್ಟ ಪದ್ಧತಿಯನ್ನು ತಡೆಯಲು ಸರ್ಕಾರ ತೆಗೆದುಕೊಂಡಿರುವ ಸೂಕ್ತ ಕ್ರಮಗಳು.

ಶ್ರೀ ಎಸ್.ಆರ್. ಬೊಮ್ಮಾಯಿ (ಮುಖ್ಯಮಂತ್ರಿಗಳು).—

ಅ) ೧೯೬೭ -೬೮-ಯಾವುದೂ ಇಲ್ಲ ೧೯೬೮-೬೯-ಎರಡು ಕಾಲೇಜುಗಳಿಗೆ ಲೆಟರ್ ಆಫ್ ಇಂಟೆಂಟ್ ನೀಡಲಾಗಿದ್ದು, ಅವುಗಳಲ್ಲಿ ಒಂದನ್ನು ಹಿಂತೆಗೆದುಕೊಳ್ಳಲಾಗಿದೆ.

ಆ) ತಿಳಿದಿ